ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಸಭಾಂಗಣದಲ್ಲಿ ದಿನಾಂಕ 23-6-2012 ರಂದು ಜರುಗಿದ ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ವ್ಯವಸ್ಥಾಪನಾ ಮಂಡಳಿಯ ಹತ್ತನೇಯ ಸಭೆಯ ನಡುವಳಿಗಳು:

ಉಪಸ್ಥಿತರಿದ್ದ ಸದಸ್ಯರು:

| | | |
|---|---|---|
| 1. | ಡಾ. ಬಿ.ವಿ. ಪಾಟೀಲ | ಅಧ್ಯಕ್ಷರು |
| 2. | ಶ್ರೀ ಎಂ.ವಿ. ಗುತ್ತೇದಾರ | ಸದಸ್ಯರು |
| 3. | ಶ್ರೀ ಅಲ್ಲಮಪ್ರಭು ಪಾಟೀಲ | ಸದಸ್ಯರು |
| 4. | ಶ್ರೀ ಶಂಕರಗೌಡ ಹರವಿ | ಸದಸ್ಯರು |
| 5. | ಶ್ರೀ ಭೋಜನಗೌಡ | ಸದಸ್ಯರು |
| 6. | ಶ್ರೀ ವೆಂಕನಗೌಡ ಮಲ್ಕಾಪುರ | ಸದಸ್ಯರು |
| 7. | ಶ್ರೀ ಶಿವಪ್ಪ ಬಿ. ಬಲ್ಲಿದವ | ಸದಸ್ಯರು |
| 8. | ಶ್ರೀಮತಿ ಹೆಚ್.ಸಿ. ಆಶಾ ಶೇಷಾದ್ರಿ | ಸದಸ್ಯರು |
| 9. | ಶ್ರೀ ಬಸವರಾಜ ಪಾಟೀಲ್ ಇಟಗಿ | ಸದಸ್ಯರು |
| 10. | ಶ್ರೀ ಜಿ. ತಿಮ್ಮನಗೌಡ ಪಾಟೀಲ್ | ಸದಸ್ಯರು |
| 11. | ಡಾ. ಎಸ್.ಜಿ. ಪಾಟೀಲ | ಸದಸ್ಯರು |
| 12. | ಡಾ. ಪಿ. ಬಾಲಕೃಷ್ಣನ್ | ಸದಸ್ಯ-ಕಾರ್ಯದರ್ಶಿ |

ಪ್ರಾರಂಭದಲ್ಲಿ ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಮಾನ್ಯ ವ್ಯವಸ್ಥಾಪನಾ ಮಂಡಳಿಯ ಹತ್ತನೇಯ ಸಭೆಗೆ ಸರ್ವಸದಸ್ಯರನ್ನು ಮಾನ್ಯ ಕುಲಪತಿಗಳು ಹಾಗೂ ಅಧ್ಯಕ್ಷರು ಸ್ವಾಗತಿಸಿ ಸಭೆಯನ್ನು ಪ್ರಾರಂಭಿಸಿದರು.

ಕಾರ್ಯಸೂಚಿಯ ವಿಷಯವಾರು ಪ್ರಕಾರ ಚರ್ಚಿಸುವುದಕ್ಕಿಂತ ಮುಂಚೆ, ನಮ್ಮ ವಿಶ್ವವಿದ್ಯಾಲಯದ 10 ಸ್ನಾತಕ ವಿದ್ಯಾರ್ಥಿಗಳು (ಕೃಷಿ ಮಹಾವಿದ್ಯಾಲಯ ರಾಯಚೂರಿನಿಂದ-7 ಮತ್ತು ಕೃಷಿ ತಾಂತ್ರಿಕ ಮಹಾವಿದ್ಯಾಲಯ ರಾಯಚೂರಿನಿಂದ-3) ಇತ್ತೀಚೆಗೆ ಏರ್ಪಡಿಸಿದ ಐ.ಸಿ.ಎ.ಆರ್.ನ ಜೂನಿಯರ್ ರಿಸರ್ಚ್ ಫೆಲೋಶಿಪ್ (ಜೆ.ಆರ್.ಎಫ್) ಪರೀಕ್ಷೆಯಲ್ಲಿ ಅತ್ಯುತ್ತಮ ಸಾಧನೆಗೈದ ವಿಷಯವನ್ನು ಅಧ್ಯಕ್ಷರು ಘನ ವೇದಿಕೆಯ ಅವಗಾಹನೆಗೆ ತಂದರು. ಕೇವಲ 3 ವರ್ಷಗಳ ಹಿಂದೆಯಷ್ಟೆ ಕೃವಿವಿ ರಾಯಚೂರು ಅಸ್ತಿತ್ವದಲ್ಲಿ ಬಂದಿದ್ದು, ಈ ಸಾಧನೆಯು ವಿಶ್ವವಿದ್ಯಾಲಯದ ಒಂದು ಮಹತ್ಸಾಧನೆಯಾಗಿರುತ್ತದೆ. ಇತ್ತೀಚೆಗೆ ಕೊಯಂಬತ್ತೂರ್‌ನಲ್ಲಿ ಜರುಗಿದ ಪ್ರಾದೇಶಿಕ ಸಭೆಯಲ್ಲಿ ಡೈರೆಕ್ಟರ್ ಜನರಲ್, ಐ.ಸಿ.ಎ.ಆರ್. ನವದೆಹಲಿ ಅವರು ಈ ಕುರಿತು ಅತೀವ ಮೆಚ್ಚುಗೆ ವ್ಯಕ್ತಪಡಿಸಿರುತ್ತಾರೆ. ಮುಂದುವರೆದು, ವಿಶ್ವವಿದ್ಯಾಲಯವು 2008-'09 ರಲ್ಲಿ ರೂ. 11.13 ಲಕ್ಷಗಳಷ್ಟು ನಷ್ಟವನ್ನು ಹೊಂದಿದ್ದರೆ, 2011-'12 ರಲ್ಲಿ ರೂ. 3.69 ಕೋಟಿಗಳಷ್ಟು ಲಾಭವನ್ನು ಪಡೆದಿರುತ್ತದೆ. ಕೃವಿವಿಯ ಸಂಸ್ಥೆಗಳ ಹೆಚ್ಚಿನ ಪರಿಶ್ರಮ ಹಾಗೂ ಉತ್ತಮ ನಿರ್ವಹಣೆಯಿಂದಾಗಿ ಇದನ್ನು ಸಾಧಿಸಿದ್ದು, ಇದು ವಿಶ್ವವಿದ್ಯಾಲಯದ ಬೆಳವಣಿಗೆಯನ್ನು ಸೂಚಿಸುತ್ತದೆಯೆಂದು ಅಧ್ಯಕ್ಷರು ಘನ ವೇದಿಕೆಯ ಅವಗಾಹನೆಗೆ ತಂದರು. ಇದಲ್ಲದೆ, ಚಿತಾಪುರದಲ್ಲಿರುವ ಕರ್ನಾಟಕ ಸರಕಾರದ ಕೃಷಿ ಇಲಾಖೆಗೆ ಸಂಬಂಧಿಸಿದ ಇನ್ನೊಂದು ಸಂಶೋಧನಾ ಕೇಂದ್ರವನ್ನು ಪಡೆದಿದ್ದು, ಅದನ್ನು 10 ವರ್ಷಗಳ ಅವಧಿಗಾಗಿ ಗೇಣಿ ಕರಾರಿನೊಂದಿಗೆ ಒಡಂಬಡಿಕೆಗೆ ಸಹಿ ಮಾಡಬೇಕಾಗಿದೆ. ಸದರಿ ಕೇಂದ್ರವು ದ್ವಿದಳಧಾನ್ಯ ಬೀಜೋತ್ಪಾದನೆ ಮಾಡಲು ಸಾಮರ್ಥ್ಯವುಳ್ಳದ್ದಾಗಿರುತ್ತದೆ.

ಇದಾದ ನಂತರ, ಮಾನ್ಯ ಸದಸ್ಯರಾದ ಶ್ರೀ ಭೋಜನಗೌಡ ಅವರು ಕುಲಪತಿಗಳು ಹಾಗೂ ಅಧ್ಯಕ್ಷರವರಿಗೆ ಬರೆದ ದಿನಾಂಕ 14-5-2012 ರ ತಮ್ಮ ಪತ್ರದಲ್ಲಿ ತಿಳಿಸಿದ ಕೆಲವೊಂದು ವಿಷಯಗಳ ಬಗ್ಗೆ ಚರ್ಚಿಸುವ ಅವಶ್ಯಕತೆ

ಇದೆಯೆಂದು ಮಾನ್ಯ ಸದಸ್ಯರಾದ ಶ್ರೀ ಎಂ.ವಿ. ಗುತ್ತೇದಾರ ಅವರು ತಿಳಿಸಿದರು. ಇದಕ್ಕೆ ಸಂಬಂಧಿಸಿದಂತೆ, ಅಧ್ಯಕ್ಷರು ಸದರಿ ದಿನಾಂಕದ ಪತ್ರಕ್ಕೆ ಸ್ಪಷ್ಟವಾಗಿ ಉತ್ತರವನ್ನು ನೀಡಿರುವುದಾಗಿ ಮತ್ತು ಮಾನ್ಯ ಸದಸ್ಯರಾದ ಶ್ರೀ ಭೋಜನಗೌಡ ಅವರು ತಮಗೆ ಅನುಕೂಲಕರವಾದ ಯಾವುದೇ ಸಮಯಕ್ಕೆ ವಿಶ್ವವಿದ್ಯಾಲಯಕ್ಕೆ ಬಂದು ಅವರು ಕೇಳಿರುವ ವಿಷಯಗಳಿಗೆ ಸ್ಪಷ್ಟೀಕರಣಗಳನ್ನು ಪಡೆಯಬಹುದೆಂದು ಸಲಹೆ ನೀಡಿರುವುದಾಗಿ ಸಭೆಗೆ ತಿಳಿಸಿದರು. ಮುಂದುವರೆದು, ಸ್ಥಿರೀಕರಿಸುವ ಎಲ್ಲಾ ವಿಷಯಗಳಿಗೆ ಅಧ್ಯಕ್ಷರು ಸ್ಪಷ್ಟೀಕರಣಗಳನ್ನು / ಉತ್ತರಗಳನ್ನು ವಿವರವಾಗಿ ನೀಡಿದರು. ಮಾನ್ಯ ಸದಸ್ಯರು ಹಾಗೂ ಎಸ್.ಸಿ.ಪಿ./ಎಸ್.ಟಿ.ಪಿ. ಯೋಜನೆಗೆ ಸಂಬಂಧಿಸಿದ ಸಮಿತಿಯ ಅಧ್ಯಕ್ಷರಾದ ಶ್ರೀ ಶಿವಪ್ಪ ಬಿ. ಬಲ್ಲಿದವ ಅವರನ್ನು ಮುಂದಿನ ಸೂಕ್ತ ಕ್ರಮ ಕೈಗೊಳ್ಳಲು ಸಮಿತಿಯ ವರದಿಯನ್ನು ಆದಷ್ಟು ಬೇಗ ಸಲ್ಲಿಸುವಂತೆ ಇದೇ ಸಂದರ್ಭದಲ್ಲಿ ವಿನಂತಿಸಲಾಯಿತು.

ತದನಂತರ, ಕಾರ್ಯಸೂಚಿಯ ಪ್ರಕಾರ ಒಂದೊಂದಾಗಿ ವಿಷಯಗಳನ್ನು ಚರ್ಚಿಸಿ ಕೆಳಕಂಡಂತೆ ತೀರ್ಮಾನಗಳನ್ನು ಕೈಗೊಳ್ಳಲಾಯಿತು.

| | |
|---|---|
| **ಅನುಕ್ರಮ ಸಂ: 1** | **ದಿನಾಂಕ 28-1-2012 ಹಾಗೂ 21-4-2012 ರಂದು ಜರುಗಿದ ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಮಾನ್ಯ ವ್ಯವಸ್ಥಾಪನಾ ಮಂಡಳಿಯ ಎಂಟನೇಯ ಹಾಗೂ ಒಂಭತ್ತನೇಯ ಸಭೆಯ ನಡುವಳಿಗಳನ್ನು ಸ್ಥಿರೀಕರಿಸುವುದು ಮತ್ತು ಅವುಗಳ ಪ್ರಕಾರ ಕೈಗೊಂಡ ಕ್ರಮಗಳನ್ನು ಅನುಮೋದಿಸುವುದು.** |

**ಠರಾವು:**

ವಿಸ್ತೃತವಾದ ಚರ್ಚೆಯ ನಂತರ, ಅನುಕ್ರಮವಾಗಿ ದಿನಾಂಕ 28-1-2012 ಹಾಗೂ 21-4-2012 ರಂದು ಜರುಗಿದ ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಮಾನ್ಯ ವ್ಯವಸ್ಥಾಪನಾ ಮಂಡಳಿಯ ಎಂಟನೇಯ ಹಾಗೂ ಒಂಭತ್ತನೇಯ ಸಭೆಗಳ ನಡುವಳಿಗಳನ್ನು ಓದಲಾಯಿತೆಂದು ಪರಿಗಣಿಸಿ, ಸ್ಥಿರೀಕರಿಸಿ ಹಾಗೂ ಅವುಗಳ ಪ್ರಕಾರ ಕೈಕೊಂಡ ಕ್ರಮಗಳಿಗೆ ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು.

| | |
|---|---|
| **ಅನುಕ್ರಮ ಸಂ: 2** | **ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಹಣಕಾಸು ಸಮಿತಿಯು ಅನುಮೋದಿಸಿ ಶಿಫಾರಸ್ಸು ಮಾಡಿದ ವಿಷಯಗಳಿಗೆ ಅನುಮೋದನೆ ನೀಡುವ ಕುರಿತು.** |

ಹಣಕಾಸು ಸಮಿತಿ ಸಭೆಯ ನಡಾವಳಿಗಳನ್ನು ಮಾನ್ಯ ಅಧ್ಯಕ್ಷರು ವಿಶ್ವವಿದ್ಯಾಲಯದ ವಾರ್ಷಿಕ ಲೆಕ್ಕ ಪತ್ರಗಳ ವಿವರ ಹಾಗೂ 2012-13 ನೇ ಸಾಲಿನ ಆಯವ್ಯಗಳ ವಿವರಗಳನ್ನು ವಿವರಿಸಿದರು.

**ಠರಾವು:**

ಚರ್ಚೆಯ ಸಂದರ್ಭದಲ್ಲಿ, ಹಣಕಾಸು ಸಮಿತಿಯ ಹಾಲಿ ಅಧಿಕಾರೇತರ ಸದಸ್ಯರಾದ ಶ್ರೀ ಭೋಜನಗೌಡ ಅವರು ಹಣಕಾಸು ಸಮಿತಿ ಸದಸ್ಯರ ರಾಜಿನಾಮೆ ನೀಡಿದ್ದರಿಂದ, ಶ್ರೀ ಭೋಜನಗೌಡ ಅವರ ಸ್ಥಾನದಲ್ಲಿ ಶ್ರೀ ಅಲ್ಲಮಪ್ರಭು ಪಾಟೀಲ್ ಅವರನ್ನು ಹಣಕಾಸು ಸಮಿತಿಯ ಅಧಿಕಾರೇತರ ಸದಸ್ಯರೆಂದು ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು. ವಿಸ್ತೃತವಾದ ಚರ್ಚೆಯ ನಂತರ, 2012-2013 ನೇ ಸಾಲಿನ ಅಂದಾಜು ಆಯವ್ಯಯ ಹಾಗೂ 2011-2012 ನೇ ಸಾಲಿನ ಪರಿಷ್ಕೃತ ಆಯವ್ಯಯ, 2008-2009 ರಿಂದ 2010-2011 ನೇ ಸಾಲುಗಳ ವಾರ್ಷಿಕ ಲೆಕ್ಕ ಪತ್ರಗಳು, 2011-2012 ನೇ ಸಾಲಿನಲ್ಲಿ ತೆಗೆದುಕೊಂಡ ಕಾಮಗಾರಿಗಳು ಹಾಗೂ 2012-2013 ನೇ ಸಾಲಿನಲ್ಲಿ ಮುಂದುವರೆದ ಕಾಮಗಾರಿಗಳು 2012-2013 ನೇ ಸಾಲಿನಲ್ಲಿ ಪ್ರಸ್ತಾಪಿಸಿದ ಹೊಸ ಕಾಮಗಾರಿಗಳು, 2011-2012 ನೇ ಸಾಲಿನಲ್ಲಿ

ಖರೀದಿಸಿದ ಉಪಕರಣಗಳ ಹಾಗೂ ಯಂತ್ರೋಪಕರಣಗಳ ಖರೀದಿ 2012–2013 ನೇ ಸಾಲಿನಲ್ಲಿ ಖರೀದಿಸುವುದನ್ನು ಮುಂದುವರೆಸಿದ್ದು ಮತ್ತು ಡಾ. ಎ.ಸಿ. ಸುಧಾಕರ, ಸಹಾಯಕ ಪ್ರಾಧ್ಯಾಕರು (ಮೀನುಗಾರಿಕೆ), ಮುಖ್ಯ ಕೃಷಿ ಸಂಶೋಧನಾ ಕೇಂದ್ರ ರಾಯಚೂರು ಅವರ ವೈದ್ಯಕೀಯ ವೆಚ್ಚದ ಮರುಪಾವತಿಗಾಗಿ ಕರ್ನಾಟಕ ವೈದ್ಯಕೀಯ ಮಂಡಳಿಗೆ ಶಿಫಾರಸ್ಸು ಮಾಡಿರುವ ವಿಷಯಗಳಿಗೆ ಘನ ವೇದಿಕೆಯು ಅನುಮೋದನೆ ನೀಡಿತು.

(ಕ್ರಮ : ಹಣಕಾಸು ನಿಯಂತ್ರಣಾಧಿಕಾರಿಗಳು / ಸರಕು ಖರಿದಿ ಅಧಿಕಾರಿಗಳು)

| | |
|---|---|
| **ಅನುಕ್ರಮ ಸಂ: 3** | **ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ದೊಡ್ಡ ಪ್ರಮಾಣದ ಸಿವಿಲ್ ಕಾಮಗಾರಿಗಳನ್ನು ಸೆಂಟ್ರಲ್ ಪಬ್ಲಿಕ್ ವರ್ಕ್ಸ್ ಡಿಪಾರ್ಟ್‌ಮೆಂಟ್(ಸಿ.ಪಿ.ಡಬ್ಲ್ಯುಡಿ.) ಹುಬ್ಬಳ್ಳಿ ವಿಭಾಗಕ್ಕೆ ವಹಿಸಿಕೊಡುವ ಕುರಿತು.** |

ಕೃವಿವಿ ರಾಯಚೂರಿನಲ್ಲಿ ಸಿವಿಲ್ ಕಾಮಗಾರಿಗಳಿಗಾಗಿ ಇ–ಪ್ರಕ್ಯೂರ್‌ಮೆಂಟ್ ಕುರಿತಾಗಿ ವಿವರಿಸುತ್ತಾ, ಸಿವಿಲ್ ಕಾಮಗಾರಿಗಳನ್ನು ಕೈಗೊಳ್ಳಲು ಸೆಂಟ್ರಲ್ ಪಬ್ಲಿಕ್ ವರ್ಕ್ಸ್ ಡಿಪಾರ್ಟ್‌ಮೆಂಟ್ (ಸಿ.ಪಿ.ಡಬ್ಲ್ಯುಡಿ.) ನವರು ಎಸ್ಟಿಮೇಟ್‌ನ ಶೇಕಡ 4.6 ರಷ್ಟು ಇಲಾಖಾ ತೆರಿಗೆಯನ್ನು ವಿಧಿಸಿದರೆ, ಕರ್ನಾಟಕ ಪೋಲೀಸ್ ಹೌಸಿಂಗ್ ಕಾರ್ಪೋರೇಶನ್ ನವರು ಎಸ್ಟಿಮೇಟ್‌ನ ಶೇಕಡ 10 ರಷ್ಟು ಇಲಾಖಾ ತೆರಿಗೆಯನ್ನು ವಿಧಿಸಿರುವುದಾಗಿ ಸಭೆಯ ಗಮನಕ್ಕೆ ತಂದರು. ಪೋಲೀಸ್ ಹೌಸಿಂಗ್ ಕಾರ್ಪೋರೇಶನ್‌ನವರು ಕೈಗೊಂಡಿರುವ ಸಿವಿಲ್ ಕಾಮಗಾರಿಗಳಿಗೆ ದೂರುಗಳು ಇವೆಯೆಂದು ಸಹ ತಿಳಿಸಿದರು.

**ಠರಾವು:**

ಸುದೀರ್ಘ ಚರ್ಚೆಯ ನಂತರ, ಸದರಿ ವಿಷಯಕ್ಕೆ ಘನ ವೇದಿಕೆಯು ಸರ್ವಾನುಮತದಿಂದ ಅನುಮೋದನೆ ನೀಡಿತು ಹಾಗೂ ಅದರ ಪ್ರಕಾರವೇ ಕೃವಿವಿ ರಾಯಚೂರಿನ ದೊಡ್ಡ ಪ್ರಮಾಣದ ಸಿವಿಲ್ ಕಾಮಗಾರಿಗಳನ್ನು ಕೈಗೊಳ್ಳಲು ಖ್ಯಾತಿವೆತ್ತ ಏಜೆನ್ಸಿಯಾದ ಸಿ.ಪಿ.ಡಬ್ಲ್ಯುಡಿ. ಹುಬ್ಬಳ್ಳಿ ವಿಭಾಗಕ್ಕೆ ವಹಿಸಿಕೊಡಲಾಗುವುದು.

(ಕ್ರಮ : ಕಾರ್ಯನಿರ್ವಾಹಕ ಅಭಿಯಂತರರು)

| | |
|---|---|
| **ಅನುಕ್ರಮ ಸಂ: 4** | **ಕೃಷಿ ಸಂಶೋಧನಾ ಕೇಂದ್ರ, ಹಗರಿ ಮತ್ತು ಬೀದರ್ ನಲ್ಲಿ ಕೃಷಿ ಡಿಪ್ಲೋಮ ಕೋರ್ಸ್ ಅನ್ನು ಪ್ರಾರಂಭಿಸುವ ಕುರಿತು.** |

**ಠರಾವು:**

ವಿಸ್ತೃತ ಚರ್ಚೆಯ ನಂತರ, ಕೃಷಿ ಡಿಪ್ಲೋಮ ಕೋರ್ಸ್ ಅನ್ನು ಕೃಷಿ ಸಂಶೋಧನಾ ಕೇಂದ್ರ ಹಗರಿ ಹಾಗೂ ಬೀದರ್‌ಗಳಲ್ಲಿಯೂ ಸಹ 2012–'13 ನೇ ಶೈಕ್ಷಣಿಕ ವರ್ಷದಿಂದ ಪ್ರಾರಂಭಿಸಲು ಪ್ರಸ್ತಾಪಿಸಲಾದ ಪ್ರಸ್ತಾವನೆಗೆ ಘನ ವೇದಿಕೆಯು ಸರ್ವಾನುಮತದಿಂದ ಅನುಮೋದನೆ ನೀಡಿತು.

(ಕ್ರಮ : ಕುಲಸಚಿವರು / ವಿಸ್ತರಣಾ ನಿರ್ದೇಶಕರು)

| | |
|---|---|
| **ಅನುಕ್ರಮ ಸಂ: 5** | **ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ವಿವಿಧ ಆವರಣಗಳಲ್ಲಿ ಹತ್ತು ಲಕ್ಷ ರೂಪಾಯಿಗಳಿಗೆ ಮೀರಿದ ಟೆಂಡರ್ ಮಾಡಿದ ಸಿವಿಲ್ ಕಾಮಗಾರಿಗಳನ್ನು ಕೈಗೊಳ್ಳಲು ಅನುಮೋದನೆ ಕುರಿತು.** |

**ಠರಾವು:**

ಸದರಿ ವಿಷಯದ ಕುರಿತು ಚರ್ಚಿಸುವ ಸಂದರ್ಭದಲ್ಲಿ ಕೃವಿವಿ ರಾಯಚೂರಿನಲ್ಲಿ ಕೈಗೊಳ್ಳಲಾಗುತ್ತಿರುವ ಸಿವಿಲ್ ಕಾಮಗಾರಿಗಳನ್ನು ಸೂಕ್ತ ರೀತಿಯಲ್ಲಿ ನಿಗಾ (ಮಾನಿಟರಿಂಗ್) ಇಡಲು ಹಾಗೂ **ಯಾವುದೇ ಒಪ್ಪಂದವಿಲ್ಲದೇ**

ಗುಣವತ್ತತೆಯನ್ನು ಕಾಪಾಡಿಕೊಳ್ಳುವಂತೆ ಮಾನ್ಯ ಸರ್ವ ಸದಸ್ಯರುಗಳು ಸರ್ವಾನುಮತದಿಂದ ಒತ್ತು ನೀಡಿದರು ಹಾಗೂ ಸದರಿ ವಿಷಯಕ್ಕೆ ಘನ ವೇದಿಕೆಯು ಅನುಮೋದನೆ ನೀಡಿತು.

(ಕ್ರಮ : ಕಾರ್ಯನಿರ್ವಾಹಕ ಅಭಿಯಂತರರು)

| | |
|---|---|
| ಅನುಕ್ರಮ ಸಂ: 6 | **ಶ್ರೀ ಡಿ. ನಾರಾಯಣ ಇವರನ್ನು ಸಹಾಯಕ ಹಣಕಾಸು ನಿಯಂತ್ರಣಾಧಿಕಾರಿ ಹುದ್ದೆಯಿಂದ ಉಪ–ಹಣಕಾಸು ನಿಯಂತ್ರಣಾಧಿಕಾರಿ ಹುದ್ದೆಗೆ ಮುಂಬಡ್ತಿ ನೀಡಲು ಅನುಮತಿ ಕುರಿತು.** |

**ಠರಾವು:**

ಚರ್ಚೆಯ ನಂತರ, ಸದರಿ ವಿಷಯಕ್ಕೆ ಘನ ವೇದಿಕೆಯು ಸರ್ವಾನುಮತದಿಂದ ಅನುಮೋದನೆ ನೀಡಿತು ಹಾಗೂ ಈ ಕುರಿತು ಸೂಕ್ತ ಆದೇಶ ಹೊರಡಿಸಲಾಗುವುದು.

(ಕ್ರಮ : ಕುಲಸಚಿವರು)

| | |
|---|---|
| ಅನುಕ್ರಮ ಸಂ: 7 | **ಬ್ಯಾಕ್‌ಲಾಗ್ ಹುದ್ದೆಗಳಿಗೆ ಶಿಕ್ಷಕರನ್ನು ನೇಮಕಾತಿ ಮಾಡಿಕೊಳ್ಳಲು ಅನುಮೋದನೆ ಕುರಿತು.** |

**ಠರಾವು:**

ಚರ್ಚೆಯ ನಂತರ, ಸದರಿ ವಿಷಯಕ್ಕೆ ಘನ ವೇದಿಕೆಯು ಸರ್ವಾನುಮತದಿಂದ ಅನುಮೋದನೆ ನೀಡಿತು ಹಾಗೂ ಈ ಕುರಿತು ವಿಶ್ವವಿದ್ಯಾಲಯವು ಸಂಬಂಧಪಟ್ಟ ಅಭ್ಯರ್ಥಿಗಳವರಿಗೆ ಸೂಕ್ತ ಆದೇಶಗಳನ್ನು ಹೊರಡಿಸಬೇಕಾಗುವುದು.

(ಕ್ರಮ : ಕುಲಸಚಿವರು)

| | |
|---|---|
| ಅನುಕ್ರಮ ಸಂ: 8 | **ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಅಧಿಕಾರಿಗಳ ನೇಮಕಾತಿಯ ಆಯ್ಕೆ ಪಟ್ಟಿಗೆ ಅನುಮೋದನೆ ಕುರಿತು.** |

**ಠರಾವು:**

ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡಗಳ ಹಾಗೂ ಇತರೇ ವರ್ಗಗಳವರಿಗೆ ಕೃವಿವಿ ಅಧಿಕಾರಿಗಳ ಹುದ್ದೆಗಳಲ್ಲಿ ಮೀಸಲಾತಿ ಹಾಗೂ ಇದಕ್ಕೆ ಸಂಬಂಧಪಟ್ಟಂತೆ ಹಾಗೂ ಸರಕಾರದಿಂದ ತೀರ್ಮಾನವಾಗುವವರೆಗೆ ಅಧಿಕಾರಿಗಳ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಬಾರದೆಂಬುದರ ಬಗ್ಗೆ ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಕರ್ನಾಟಕ ಸರಕಾರ ಇವರ ದಿನಾಂಕ 22–6–2012 ರ ಆದೇಶವು ಸ್ವೀಕೃತವಾಗಿದ್ದುದರ ಕುರಿತು ಚರ್ಚಿಸಲಾಯಿತು. ಈ ವಿಷಯದ ಕುರಿತು ಸಾವಧಿಕ ಅವಧಿಯ ಅಧಿಕಾರಿಗಳ ಹುದ್ದೆಗಳಿಗೆ ಮೀಸಲಾತಿಯನ್ನು ರಾಷ್ಟ್ರದ ಯಾವುದೇ ಭಾಗದಲ್ಲಾಗಲೀ ಅಥವ ಕರ್ನಾಟಕದಲ್ಲಾಗಲೀ ನೀಡಿರುವುದಿಲ್ಲವೆಂದು ಅಧ್ಯಕ್ಷರು ಸ್ಪಷ್ಟೀಕರಿಸಿದರೂ ಸಹ ಈ ವಿಷಯವನ್ನು ಮುಂದೂಡಲು ತೀರ್ಮಾನಿಸಲಾಯಿತು. ಮುಂದುವರೆದು, ಈ ಕುರಿತಾಗಿ ಆಯುಕ್ತರಿಗೆ ಪತ್ರ ಬರೆದು ಸ್ಪಷ್ಟೀಕರಣ ಪಡೆಯಲು ಮಾನ್ಯ ಸದಸ್ಯರುಗಳು ಸಲಹೆ ನೀಡಿದರು ಹಾಗೂ ಸ್ಪಷ್ಟೀಕರಣ ಬಂದ ತಕ್ಷಣವೇ ವ್ಯವಸ್ಥಾಪನಾ ಮಂಡಳಿಯ ತುರ್ತು ಸಭೆ ಕರೆದು ತೀರ್ಮಾನ ಕೈಗೊಳ್ಳಬಹುದೆಂದು ತಿಳಿಸಿದರು. ಒಂದು ವೇಳೆ ಕರ್ನಾಟಕ ಸರಕಾರದ ಸೂಕ್ತ ಇಲಾಖೆ / ಪ್ರಾಧಿಕಾರಗಳಿಂದ ನಿರ್ಧಿಷ್ಟವಾದ ಆದೇಶಗಳು ಒಂದು ತಿಂಗಳೊಳಗಾಗಿ ಸ್ವೀಕೃತವಾಗದಿದ್ದ ಪಕ್ಷದಲ್ಲಿ, ಅಧಿಕಾರಗಳ ಹುದ್ದಗಳನ್ನು ವಿಶ್ವವಿದ್ಯಾಲವು ತಾನಾಗಿಯೇ ಭರ್ತಿಮಾಡಿಕೊಳ್ಳಬಹುದು.

(ಕ್ರಮ : ಕುಲಸಚಿವರು)

| ಅನುಕ್ರಮ ಸಂ: 9 | ಡಾ. ಬಿ.ವಿ. ಪಾಟೀಲ್, ಕುಲಪತಿಗಳು, ಕೃಷಿ ವಿಶ್ವವಿದ್ಯಾಲಯ ರಾಯಚೂರು ಅವರ ಯು.ಎಸ್.ಎ.ಗೆ ಪ್ರವಾಸಕ್ಕಾಗಿ ಅನುಮೋದನೆ ಕುರಿತು. |
|---|---|

ಮಾನ್ಯ ಅಧ್ಯಕ್ಷರು ಹಾಗೂ ಕುಲಪತಿಗಳಾದ ಡಾ. ಬಿ.ವಿ. ಪಾಟೀಲ್ ಅವರನ್ನು ಇಂಟರ್‌ನ್ಯಾಶ್ನಲ್ ಕಾಟನ್ ಅಡ್‌ವೈಸರಿ ಕಮಿಟಿ (ಐಸಿಎಸಿ) ಯ ಕಾರ್ಯಕಾರಿ ಸಮಿತಿ ಸದಸ್ಯರೆಂದು 2012-2014 ಸಾಲಿಗಾಗಿ ಆಯ್ಕೆಯಾಗಿದ್ದಕ್ಕಾಗಿ ಸರ್ವಸದಸ್ಯರು ಶುಭ ಹಾರೈಸಿದರು.

**ಠರಾವು:**

ದೀರ್ಘ ಚರ್ಚೆಯ ನಂತರ, ಡಾ. ಬಿ.ವಿ. ಪಾಟೀಲ್, ಕುಲಪತಿಗಳು, ಕೃಷಿ ವಿಶ್ವವಿದ್ಯಾಲಯ ರಾಯಚೂರು ಅವರು ವಾಷಿಂಗ್‌ಟನ್ ಡಿಸಿ, ಯು.ಎಸ್.ಎ. ದಲ್ಲಿ ಏರ್ಪಡಿಸಿದ ಐ.ಸಿ.ಎ.ಸಿ.ಯ ಕಾರ್ಯಕಾರಿ ಸಮಿತಿಯ ಪ್ರಥಮ ಸಭೆಯಲ್ಲಿ ಅದರ ಹಣಕಾಸಿನ ನೆರವಿನೊಂದಿಗೆ ಪಾಲ್ಗೊಳ್ಳಲು, ಹಾಗೂ ಕೊಲರಾಡೊ ಸ್ಟೇಟ್ ಯುನಿವರ್ಸಿಟಿ, ಯು.ಎಸ್.ಎ., ಅಬರ್ನ್ ಯುನಿವರ್ಸಿಟಿ, ಯು.ಎಸ್.ಎ. ಹಾಗೂ ಟಸ್ಕ್‌ಗೀ ಯುನಿವರ್ಸಿಟಿ, ಯು.ಎಸ್.ಎ. ಗೆ ಅವರುಗಳ ಆಹ್ವಾನದ ಮೇರೆಗೆ ಮಾಹಿತಿಯನ್ನು ವೃದ್ಧಿಸಿಕೊಳ್ಳಲು ಹಾಗೂ ಕೃವಿವಿ ರಾಯಚೂರಿನೊಂದಿಗೆ ಕೃಷಿ ವಿಷಯಗಳಲ್ಲಿ ಅಂತರಿಕ-ಸಂಸ್ಥೆಗಳ ಸಂಬಂಧಗಳನ್ನು ಬಲಪಡಿಸಿಕೊಳ್ಳಲು ಅಧೀಕೃತ ಪ್ರವಾಸವನ್ನು ದಿನಾಂಕ 4-7-2012 ರಿಂದ 16-7-2012 ರ ವರೆಗೆ ಕೈಗೊಳ್ಳಲಾಗುತ್ತಿರುವ ಪ್ರವಾಸದ ಪ್ರಸ್ತಾವನೆಗೆ ಮಾನ್ಯ ವ್ಯವಸ್ಥಾಪನಾ ಮಂಡಳಿಯು ಶಿಫಾರಸ್ಸು ಮಾಡಿರುತ್ತದೆ ಹಾಗೂ ಇದನ್ನು ಸರಕಾರದ ಮುಖಾಂತರ ಘನವೆತ್ತ ಕರ್ನಾಟಕದ ರಾಜ್ಯಪಾಲರು ಹಾಗೂ ಕುಲಾಧಿಪತಿಗಳು, ಕೃವಿವಿ, ರಾಯಚೂರು ಅವರಿಗೆ ಅನುಮೋದನೆಗಾಗಿ ರವಾನಿಸಲಾಗುವುದು. ಮುಂದುವರೆದು, ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಗಳ ಅಧಿನಿಯಮದ ಕಲಂ 27(8) ರ ಅನ್ವಯ ಕುಲಪತಿಗಳು ಪ್ರವಾಸದಲ್ಲಿರುವ ಅವಧಿಯಲ್ಲಿ ಶಿಕ್ಷಣ ನಿರ್ದೇಶಕರವರು ಕುಲಪತಿಗಳ ಕರ್ತವ್ಯವನ್ನು ನಿರ್ವಹಿಸುವರು

(ಕ್ರಮ : ಕುಲಪತಿಗಳು / ಶಿಕ್ಷಣ ನಿರ್ದೇಶಕರು / ಕುಲಸಚಿವರು)

| ಹೆಚ್ಚುವರಿ ಅನುಕ್ರಮ ಸಂ: 1 | **ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಪ್ರವರ್ಗ-1 ವಿದ್ಯಾರ್ಥಿಗಳಿಗೆ ಹೆಚ್ಚುವರಿ ಭೋಜನಾ ಮತ್ತು ವಸತಿ ಭತ್ಯೆ ಮಂಜೂರು ಮಾಡಲು ಅನುಮತಿ ಕುರಿತು.** |
|---|---|

**ಠರಾವು:**

ಚರ್ಚೆಯ ನಂತರ, ಸದರಿ ವಿಷಯಕ್ಕೆ ಘನ ವೇದಿಕೆಯು ಸರ್ವಾನುಮತದಿಂದ ಅನುಮೋದನೆ ನೀಡಿತು.

(ಕ್ರಮ : ಕುಲಸಚಿವರು)

| ಹೆಚ್ಚುವರಿ ಅನುಕ್ರಮ ಸಂ: 2 | **ಪರಿಷ್ಕೃತ ವೇತನ ಶ್ರೇಣಿಗಳ ಸೌಲಭ್ಯವನ್ನು ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಸೇವಾ ಸಿಬ್ಬಂದಿಯವರಿಗೂ ಕೊಡುವ ಕುರಿತು.** |
|---|---|

**ಠರಾವು:**

ಚರ್ಚೆಯ ನಂತರ, ಸದರಿ ವಿಷಯಕ್ಕೆ ಘನ ವೇದಿಕೆಯು ಸರ್ವಾನುಮತದಿಂದ ಅನುಮೋದನೆ ನೀಡಿತು.

(ಕ್ರಮ : ಕುಲಸಚಿವರು / ಹಣಕಾಸು ನಿಯಂತ್ರಣಾಧಿಕಾರಿಗಳು)

| ಹೆಚ್ಚುವರಿ ಅನುಕ್ರಮ ಸಂ: 3 | **ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಸಿಬ್ಬಂದಿಯವರಿಗೆ ವೈದ್ಯಕೀಯ ವೆಚ್ಚವನ್ನು ಹಿಂತಿರುಗಿ ಪಡೆಯಲು ಆಸ್ಪತ್ರೆಗೆ ಮಾನ್ಯತೆ ಕೊಡುವ ಕುರಿತು.** |
|---|---|

**ಠರಾವು:**

ಚರ್ಚೆಯ ನಂತರ, ವಿಶ್ವವಿದ್ಯಾಲಯದ ಸಿಬ್ಬಂದಿಯವರು ವೈದ್ಯಕೀಯ ಚಿಕಿತ್ಸೆ ಪಡೆಯಲು ರಾಯಚೂರಿನ ಪಾರಸ್ ಗಾರ್ಡನ್, ಅಲಹಾಬಾದ್ ಬ್ಯಾಂಕ್ ಹತ್ತಿರವಿರುವ "ಸುರಕ್ಷಾ" ಆಸ್ಪತ್ರೆಗೆ ಮಾನ್ಯತೆ ನೀಡಲು ಪ್ರಸ್ತಾಪಿಸಿರುವ ಪ್ರಸ್ತಾವನೆಗೆ ಘನ ವೇದಿಕೆಯು ಸರ್ವಾನುಮತದಿಂದ ಅನುಮೋದನೆ ನೀಡಿತು.

(ಕ್ರಮ : ಕುಲಸಚಿವರು)

| ಹೆಚ್ಚುವರಿ ಅನುಕ್ರಮ ಸಂ: 4 | **ಅಂತರರಾಷ್ಟ್ರೀಯ ಕಾರ್ಯಾಗಾರಗಳಲ್ಲಿ / ಅಂತರರಾಷ್ಟ್ರೀಯ ಸಮ್ಮೇಳನಗಳಲ್ಲಿ ಪ್ರಬಂಧಗಳನ್ನು ಮಂಡಿಸಲು ಶಿಕ್ಷಕರು / ವಿಜ್ಞಾನಿಗಳಿಗೆ ವಿದೇಶಗಳಿಗೆ ಪ್ರತಿನಿಯೋಜನೆ ಮಾಡುವ ಕುರಿತು.** |
|---|---|

**ಠರಾವು:**

ಚರ್ಚೆಯ ನಂತರ, ಕೃವಿವಿಯ ಶಿಕ್ಷಕರು / ವಿಜ್ಞಾನಿಗಳಿಗೆ ಅಂತರರಾಷ್ಟ್ರೀಯ ಕಾರ್ಯಾಗಾರಗಳಲ್ಲಿ / ಸಮ್ಮೇಳನಗಳಲ್ಲಿ ಪ್ರಬಂಧಗಳನ್ನು ಮಂಡಿಸಲು ವಿದೇಶಗಳಿಗೆ ವಿಶ್ವವಿದ್ಯಾಲಯವು ಪ್ರತಿನಿಯೋಜನೆ ಮಾಡಿದ ವಿಷಯಗಳನ್ನು ಪ್ರಸ್ತಾಪಿಸಿದಂತೆ ಮಾನ್ಯ ವ್ಯವಸ್ಥಾಪನಾ ಮಂಡಳಿಯು ಸರ್ವಾನುಮತದಿಂದ ಅನುಮೋದನೆ ನೀಡಿದ್ದು ಈ ಕುರಿತು ಕೈಗೊಂಡ ಕ್ರಮಕ್ಕೆ ಅನುಸಮರ್ಥನೆ ನೀಡಲಾಯಿತು.

(ಕ್ರಮ : ಕುಲಸಚಿವರು)

ಕುಲಸಚಿವರು ಹಾಗೂ ವ್ಯವಸ್ಥಾಪನಾ ಮಂಡಳಿಯ ಸದಸ್ಯ-ಕಾರ್ಯದರ್ಶಿಯವರ ಧನ್ಯವಾದಗಳೊಂದಿಗೆ ಸಭೆಯು ಮುಕ್ತಾಯಗೊಂಡಿತು.

| | |
|---|---|
| ಸಹಿ /- 30-6-2012 | ಸಹಿ /- 30-6-2012 |
| **(ಬಿ.ವಿ. ಪಾಟೀಲ)** | **(ಪಿ. ಬಾಲಕೃಷ್ಣನ್)** |
| ಕುಲಪತಿಗಳು ಹಾಗೂ ಅಧ್ಯಕ್ಷರು | ಕುಲಸಚಿವರು ಹಾಗೂ ಸದಸ್ಯ-ಕಾರ್ಯದರ್ಶಿ |
| ವ್ಯವಸ್ಥಾಪನಾ ಮಂಡಳಿ, ಕೃವಿವಿ ರಾಯಚೂರು. | ವ್ಯವಸ್ಥಾಪನಾ ಮಂಡಳಿ, ಕೃವಿವಿ ರಾಯಚೂರು. |

**(ಪಿ. ಬಾಲಕೃಷ್ಣನ್)**
ಕುಲಸಚಿವರು ಹಾಗೂ ಸದಸ್ಯ-ಕಾರ್ಯದರ್ಶಿ
ವ್ಯವಸ್ಥಾಪನಾ ಮಂಡಳಿ, ಕೃವಿವಿ ರಾಯಚೂರು.